ಜನವರಿ ತಿಂಗಳ ಅಂತ್ಯದಲ್ಲಿ ನಡೆದಿದ್ದು ಈ ಪ್ರಕರಣ. ಅದು ನಾನು ಅಡ್ಡಂಡ ಕರಮಚಂದನಲ್ಲಿ ಜೂನಿಯರ್ ಆಗಿ ಸೇರಿದ ಎರಡನೇ ವರ್ಷ. ಸಂಜೆ ನಾಲ್ಕರ ಹೊತ್ತಿಗೆ ಒಬ್ಬ ಕೃಶಕಾಯದ ವ್ಯಕ್ತಿ ಕರಮಚಂದನನ್ನು ವಿಚಾರಿಸಿಕೊಂಡು ಬಂದ. ದಪ್ಪ ಮೀಸೆ, ಗಂಭೀರ ಮೊಗದ ಆತ ತನ್ನನ್ನು ಮಧು ಬೋಪಣ್ಣ ಅಂತ ಪರಿಚಯಿಸಿಕೊಂಡ. ಆತ ಕಂದಾಯ ಇಲಾಖೆಯ ನಿವೃತ್ತ ನೌಕರ.

"ಒಂದು ಕಳ್ಳತನದ ಬಗ್ಗೆ ತಮ್ಮಲ್ಲಿ ತನಿಖೆ ಮಾಡಿ ಎಂದು ಕೋರಿ ಬಂದಿದ್ದೇನೆ." ಆತ ಬಹಳ ಮುಜುಗರಪಟ್ಟುಕೊಂಡಂತ್ತಿತ್ತು.

"ಕಳ್ಳತನ? ನೀವು ಪೊಲೀಸಿಗೆ ದೂರು ನೀಡಿಲ್ಲವೇ?" ನಾನು ಪ್ರಶ್ನೆ ಮಾಡಿದೆ.

"ಅದೇ ಸಮಸ್ಯೆಯಾಗಿರುವುದು. ಕಳ್ಳ ಯಾರು ಅಂತ ಗೊತ್ತು. ಆದರೆ ಸಾಕ್ಷ್ಯ ಇಲ್ಲ. ಮತ್ತು ಮನೆಯೊಳಗಿನ ವಿಷ್ಯ ಹೊರಗೆ ಹೋಗುವುದು ಬೇಡ ಅಂತ..." ದೂರು ಕೊಡದಿರುವುದಕ್ಕೆ ಬಂತು ಸಮಜಾಯಿಷಿ.

"ಹಾಗಿದ್ರೆ ಕಳ್ಳ ಯಾರು?" ನಾನೇ ಕೇಳಿದೆ.

"ಇನ್ಯಾರು? ನನ್ನ ಮಗನೇ. ಅಜಿತ್ ಬೋಪಣ್ಣ. ಆಗಾಗ್ಗೆ ಹಣ ಎಗರಿಸ್ತಾ ಇರುತ್ತಾನೆ. ನಿಮ್ಗೆ ಆತನನ್ನು ಸಾಕ್ಷ್ಯ ಸಮೇತ ಹಿಡಿದು, ಬುದ್ಧಿ ಹೇಳಲು ಸಾಧ್ಯವೇ?" ಆತನ ಕಣ್ಣುಗಳಲ್ಲಿ ನಿರೀಕ್ಷೆಯಿತ್ತು.

"ಓಹ್! ನಿಮ್ಮ ಕೋರಿಕೆಯ ಮೊದಲನೇ ಭಾಗ ನಮ್ಮಿಂದ ಸಾಧ್ಯ. ಬುದ್ಧಿ ಹೇಳುವ ಕೆಲಸ ನಮ್ಮದಲ್ಲ. ಏನೇ ಇರಲಿ, ದಯಮಾಡಿ, ವಿವರವಾಗಿ ಹೇಳಿ." ಕರಮಚಂದ ತುಟಿ ಎರಡು ಮಾಡಿದ.

"ಮಲೆತಿರಿಕೆ ಬೆಟ್ಟದ ಸನಿಹ ನಮ್ಮ ಮನೆ. ಅಂದ್ರೆ ಬಾಡಿಗೆ ಮನೆ. ನಮ್ಮ ಮನೇಲಿ ಇರೋದು ನನ್ನನ್ನೂ ಸೇರಿಸಿ ಐದು ಜನ. ನನ್ ಹೆಂಡ್ತಿ ಪುಷ್ಪಾ, ಮಗ ಅಜಿತ್, ಮಗಳು ಮೈಥಿಲಿ, ನಮ್ ಜೊತೆನೇ ಬಹಳ ಕಾಲದಿಂದ ಇದ್ದ ಕೆಲಸಗಾರ ಕತ್ರಿಕೊಲ್ಲಿ ನೀಲಕಂಠ. ಈಗ ವಿಷಯಕ್ಕೆ ಬರ್ತೀನಿ. ಕಳೆದ ಕೆಲವು ಸಮಯದಿಂದ, ಕಪಾಟಿನಲ್ಲಿರಿಸಿದ ಹಣ ಕಾಣೆಯಾಗತೊಡಗಿತು. ಸಣ್ಣ ಸಣ್ಣ ಮೊತ್ತಗಳ ವ್ಯತ್ಯಾಸ. ನನ್ಗೆ ಮೊದ ಮೊದಲಿಗೆ ಗೊತ್ತಾಗಲಿಲ್ಲ. ನನ್ನ ಗ್ರಹಿಕೆಯೇ ತಪ್ಪಾಗಿರಬೇಕೆಂದು ಭಾವಿಸಿದೆ. ನನ್ ಹೆಂಡ್ತಿನೂ ನಿಮ್ಗೆ ಮರೆವು ಶುರುವಾಗಿರಬೇಕು ಅಂತ ಮೂದಲಿಸುತ್ತಿದ್ದಳು. ಆದರೆ ಆಮೇಲೆ ನನಗದು ಮರೆವು ಅಲ್ಲ, ಹಣ ನಿಜವಾಗಿಯೂ ಕಾಣೆಯಾಗುತ್ತಿದೆ ಎನ್ನುವುದು ಖಚಿತವಾಯಿತು. ಒಮ್ಮೆ ನಾನು ಕಪಾಟಿನಲ್ಲಿ ಇರಿಸಿದ್ದ ಹಣದ ಮೊತ್ತವನ್ನು ಗುರುತು ಹಾಕಿಕೊಂಡು, ಪ್ರತಿದಿನ ಗಮನಿಸಿದಾಗ, ಮೂರನೆಯ ದಿನ ತುಸು ಕಡಿಮೆಯಿರುವುದು ಗೊತ್ತಾಯಿತು."

"ತುಸು ಅಂದರೆ?"

"ಐನೂರು. ಆದರೆ ಯಾವಾಗಲೂ ಇಷ್ಟೇ ಅಂತಿಲ್ಲ. ಕೆಲವೊಮ್ಮೆ ಐನೂರು, ಸಾವಿರ, ಎರಡು ಸಾವಿರ, ಹೀಗೆ. ಗರಿಷ್ಠ ಮೊತ್ತ ಕಳವಾಗಿದ್ದು ನಾಲ್ಕು ಸಾವಿರದ ಚಿಲ್ಲರೆ. ಸಣ್ಣ ಮೊತ್ತವಾದ್ದರಿಂದ ಅದು ಗೊತ್ತೂ ಆಗುವುದಿಲ್ಲ. ನನ್ಗೆ ಸಂಶಯ ಬಂದಿದ್ದು ಮಗನ ಮೇಲೆ. ಯಾಕಂದ್ರೆ ಆತ ನಿರುದ್ಯೋಗಿ. ಕಾಲೇಜಿನಲ್ಲಿ ಓದುವಾಗ ಸಹವಾಸ ದೋಷದಿಂದ ಕುಡಿಯೋಕೆ ಶುರು ಮಾಡ್ದ. ಕುಡಿಯಲಿಕ್ಕೆ ಹಣ ಬೇಕಲ್ಲ. ಅದಕ್ಕೆ ಆತ ಕಳವು ಮಾಡೋಕೆ ಆರಂಭಿಸಿದ್ದಾನೆ. ಬುದ್ಧಿವಾದ ಹೇಳಿ ನೋಡ್ದೆ. ಈಗ ಕುಡಿಯೋದು ಬಿಟ್ಟಿದ್ದೀನಿ ಅಂತಾನೆ. ನನ್ಗೆ ನಂಬಿಕೆಯಿಲ್ಲ. ನನ್ನ ಗ್ರಹಚಾರ. ಆತನಿಗೆ ಉದ್ಯೋಗವೂ ಸಿಗಲಿಲ್ಲ. ನನ್ಗೆ ಅವನೊಂದು ತಲೆನೋವು."

"ಕಳ್ಳ ಅವನೇ ಅಂತೀರಿ. ಕಳ್ಳತನಕ್ಕೆ ಸಾಕ್ಷ್ಯ ಸಿಕ್ಕಿಲ್ಲ ಅಂತಲೂ ಹೇಳ್ತೀರಿ. ನಿಮ್ಗೆ ಸಾಕ್ಷ್ಯ ಯಾಕ್ ಬೇಕು? ನನ್ಗೆ ಅನಿಸುತ್ತೆ ಈ ಪ್ರಕರಣ ನನ್ನ ವೃತ್ತಿ ಪರಿಧಿಯೊಳಗೆ ಬರುವುದಿಲ್ಲ. ಬುದ್ಧಿವಾದ ಹೇಳಲಿಕ್ಕೆ ನೀವು ಯಾರಾದರೂ ಮನಃಶಾಸ್ತ್ರಜ್ಞರನ್ನು ಕಾಣುವುದು ಮೇಲು."